# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 2142

ಸದಸ್ಯರು ಹೆಸರು : ಡಾ|| ಕೆ.ಗೋವಿಂದರಾಜ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು)

ಉತ್ತರಿಸಬೇಕಾದ ದಿನಾಂಕ : 26.03.2026

ಉತ್ತರಿಸುವ ಸಚಿವರು : ಗೃಹ ಸಚಿವರು.

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ವಿವಿಧ ಜಿಲ್ಲೆಗಳಿಂದ ಹೊರ ರಾಜ್ಯಗಳಿಂದ ಪ್ರತಿದಿನ ಲಕ್ಷಾಂತರ ಮಂದಿ ಬಂದು ಹೋಗುವ ಬೆಂಗಳೂರು ನಗರದ ಜನರು ನಿತ್ಯ ಸಂಚರಿಸುವ ಕೇಂದ್ರ ಸ್ಥಳವಾದ ಬೆಂಗಳೂರಿನ "ಮೆಜೆಸ್ಟಿಕ್" ಎಂಬ ಪ್ರದೇಶದಲ್ಲಿ ಸುಲಿಗೆಕೋರರ, ಕಳ್ಳ ಕಾಕರ, ವೇಶ್ಯಾವಾಟಿಕೆಯ ಹಾವಳಿ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಆ) | ಬಂದಿದ್ದರೆ, ಬೆಳಗಿನ ಜಾವ ಮತ್ತು ರಾತ್ರಿ ಹೊತ್ತಿನಲ್ಲಿ ಸಜ್ಜನರು ಓಡಾಡುವುದೇ ಕಷ್ಟವಾಗಿರುವ ಅಲ್ಲಿನ ಪರಿಸ್ಥಿತಿಯ ನಿವಾರಣೆಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರಗಳನ್ನು ನೀಡುವುದು) | <u>ಮೆಜೆಸ್ಟಿಕ್ ಸುತ್ತಮುತ್ತಲಿನ ಪ್ರದೇಶದಲ್ಲಿ ಸುಲಿಗೆ, ಕಳ್ಳತನ ಮತ್ತು ವೇಶ್ಯಾವಾಟಿಕೆಯಂತ ಪ್ರಕರಣಗಳ ನಿವಾರಣೆಗೆ ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.</u><br>1. ಸಾರ್ವಜನಿಕರಿಂದ ಬಂದ ದೂರುಗಳ ಆಧಾರದ ಮೇಲೆ ಸುಲಿಗೆಕೋರರು ಕಳ್ಳತನದಲ್ಲಿ ಹಾಗೂ ಪಾಕೆಟ್‌ಪಿಕ್ , ತೊಡಗಿರುವವರ ವಿರುದ್ಧ ಪ್ರಕರಣಗಳನ್ನು ದಾಖಲಿಸಿ ಕ್ರಮ ಕೈಗೊಳ್ಳಲಾಗುತ್ತಿದೆ.<br>2. ಮೆಜೆಸ್ಟಿಕ್ ಸುತ್ತಮುತ್ತ ಉಪ್ಪಾರಪೇಟೆ ಠಾಣಾ ಸರಹದ್ದಿನ ಮೆಜೆಸ್ಟಿಕ್ ಬಸ್ ನಿಲ್ದಾಣದಲ್ಲಿ 12 ಇ-ಬೀಟ್ ಪಾಯಿಂಟ್ ಟಿ ಬಿ ರಸ್ತೆಯಲ್ಲಿ 04 ಇ-ಬೀಟ್ ಪಾಯಿಂಟ್‌ಗಳು ಇದ್ದು, ಕಾಟನ್ ಪೇಟೆ ಪೊಲೀಸ್ ಠಾಣೆಯಿಂದ ಗುಬ್ಬಿ ತೋಟದಪ್ಪ ರಸ್ತೆ ಸಿಟಿ ರೈಲ್ವೆ ನಿಲ್ದಾಣ ಒಳಗೊಂಡಂತೆ 6 ಇ ಬೀಟ್ ಪಾಯಿಂಟ್‌ಗಳು ಒಟ್ಟು ಎರಡು ಪೊಲೀಸ್ ಠಾಣೆಗಳಿಂದ 22 ಇ ಬೀಟ್ ಪಾಯಿಂಟ್‌ಗಳು ಇರುತ್ತವೆ.<br>3. ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರತಿ ದಿನ ಉಪ್ಪಾರಪೇಟೆ ಪಿಎಸ್ ನಿಂದ ಪ್ರತಿ ದಿನ ಹಗಲು ಮತ್ತು ರಾತ್ರಿ ಕರ್ತವ್ಯಕ್ಕೆ 2 ಪಿಎಸ್‌ಐ, 12 ಜನ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ನೇಮಿಸಿದೆ. |

| ಕ್ರ. ಸಂ. | ಪಾಯಿಂಟ್ ಕರ್ತವ್ಯಕ್ಕೆ ನೇಮಿಸಿರುವ | ಹಗಲು ಕರ್ತವ್ಯಕ್ಕೆ ನೇಮಿಸಿರುವ ಅಧಿಕಾರಿಗಳು ಸಿಬ್ಬಂದಿಗಳು | | ರಾತ್ರಿ ಗಸ್ತು ಕರ್ತವ್ಯಕ್ಕೆ |
|---|---|---|---|---|
| 1 | ಕೆಎಸ್‌ಆರ್‌ಟಿಸಿ ಟರ್ಮಿನಲ್-1 | 01 ಪಿಎಸ್‌ಐ 01 | 1 | 1 |

| | | | | |
|---|---|---|---|---|
| 2 | ಕೆಎಸ್‌ಆರ್‌ಟಿಸಿ ಟರ್ಮಿನಲ್-2 | ಮಪಿಎಸ್ಐ | 1 | 1 |
| 3 | ಕೆಎಸ್‌ಆರ್‌ಟಿಸಿ ಟರ್ಮಿನಲ್-2ಎ | | 1 | 1 |
| 4 | ಕೆಎಸ್‌ಆರ್‌ಟಿಸಿ ಟರ್ಮಿನಲ್-3 | | 1 | 1 |
| 5 | ಬಿಎಂಟಿಸಿ ಫ್ಲೈಓವರ್ | | 2 | 2 |
| 6 | ಬಿಎಂಟಿಸಿ 4 ರಿಂಗ್ ರಸ್ತೆ | | 4 | 2 |
| 7 | ಒಪಿ ಉಸ್ತುವಾರಿ | | 1 | 1 |
| | **ಒಟ್ಟು** | **02 ಪಿಎಸ್‌ಐಗಳು** | **11** | **9** |

4. ಪ್ರತಿ ದಿನ ರಾತ್ರಿ ಗಸ್ತು ಕರ್ತವ್ಯದ ವೇಳೆ ಮಹಿಳೆಯರ ದೂರುಗಳನ್ನು ಆಲಿಸುವ ಸಲುವಾಗಿ ಉಪ್ಪಾರಪೇಟೆ ಠಾಣಾ ಸರಹದ್ದಿನಲ್ಲಿ ಚಿಕ್ಕಪೇಟೆ ಉಪ ವಿಭಾಗದಿಂದ ಒಬ್ಬ ಮಹಿಳಾ ಸಿಬ್ಬಂದಿ ಮತ್ತು ಗೃಹ ರಕ್ಷಕ ದಳದ ಸಿಬ್ಬಂದಿಗಳನ್ನು ನೇಮಿಸಿಕೊಂಡು ಬರಲಾಗುತ್ತಿದ್ದು, ಇವರುಗಳು ರಾತ್ರಿ ಗಸ್ತಿನ ವೇಳೆ ಮೀಸಲು ಸಿಬ್ಬಂದಿಗಳಾಗಿ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಾರೆ. ಅಲ್ಲದೆ ಹೆಚ್ಚುವರಿಯಾಗಿ 2 ಹೊಯ್ಸಳ ವಾಹನಗಳನ್ನು ಪ್ರತಿದಿನ ಪಾಯಿಂಟ್‌ವಾರು ಕರ್ತವ್ಯಕ್ಕೆ ನೇಮಿಸಿದೆ.

5. ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಹೊಂದಿಕೊಂಡಂತೆ ಇರುವ ಸಿಟಿ ರೈಲ್ವೆ ನಿಲ್ದಾಣದ ಗುಬ್ಬಿ ತೋಟದಪ್ಪ ರಸ್ತೆಯಲ್ಲಿ ಪ್ರತಿ ದಿನ ಕಾಟನ್‌ಪೇಟೆ ಪಿಎಸ್‌ನಿಂದ ಪ್ರತಿ ದಿನ ಹಗಲು ಮತ್ತು ರಾತ್ರಿ ಕರ್ತವ್ಯಕ್ಕೆ 1 ಪಿಎಸ್ಐ, 5 ಜನ ಸಿಬ್ಬಂದಿಗಳನ್ನು ಈ ಕೆಳಕಂಡಂತೆ ನೇಮಿಸಿದೆ.

| **ಕ್ರ. ಸಂ.** | **ಪಾಯಿಂಟ್ ಕರ್ತವ್ಯಕ್ಕೆ ನೇಮಿಸಿರುವ** | **ಹಗಲು ಕರ್ತವ್ಯಕ್ಕೆ ನೇಮಿಸಿರುವ ಅಧಿಕಾರಿಗಳು ಸಿಬ್ಬಂದಿಗಳು** | | **ರಾತ್ರಿ ಗಸ್ತು ಕರ್ತವ್ಯಕ್ಕೆ** |
|---|---|---|---|---|
| 1 | ರೈಲ್ವೆ ನಿಲ್ದಾಣದ ಎಂಟ್ರೆನ್ಸ್ | 01 ಎಎಸ್ಐ | 2 | 2 |
| 2 | ಸ್ಕೈವಾಕ್ | | 2 | 2 |
| 3 | ಸಬ್ ವೇ ರಸ್ತೆ | | 2 | 2 |
| 4 | ಗುಬ್ಬಿ ತೋಟದಪ್ಪ ರಸ್ತೆ ವಾಹನ ತಪಾಸಣಾ ಸ್ಥಳ | | 0 | 2 |
| | ಒಟ್ಟು | 01 ಎಎಸ್ಐ | 6 | 8 |

6. ಅದೇ ರೀತಿಯಾಗಿ ಹೆಚ್ಚುವರಿಯಾಗಿ ಚೀತಾ ಮತ್ತು ಹೊಯ್ಸಳ ವಾಹನಗಳು ಗಸ್ತು ಕರ್ತವ್ಯಕ್ಕೆ ನೇಮಿಸಲಾಗುತ್ತಿದೆ. ಹಾಗೂ ರಾತ್ರಿ ಕರ್ತವ್ಯದಲ್ಲಿ ಪಿಎಸ್ಐ ದರ್ಜೆಯ ಅಧಿಕಾರಿಗಳನ್ನು ನೇಮಿಸಿಕೊಂಡು ಬರಲಾಗಿದೆ.

| | | |
|---|---|---|
| | | 7. ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ಪ್ರತಿ ದಿನ ಉಪ್ಪಾರಪೇಟೆ ಪಿಎಸ್‌ನಿಂದ ಪ್ರತಿ ದಿನ 2 ಪಿಎಸ್‌ಐ, 12 ಜನ ಸಿಬ್ಬಂದಿಗಳನ್ನು ರಾತ್ರಿ ಮತ್ತು ಹಗಲು ಗಸ್ತು ಕರ್ತವ್ಯಕ್ಕೆ ನೇಮಿಸಿದ ಹೆಚ್ಚುವರಿಯಾಗಿ 2 ಹೊಯ್ಸಳ ವಾಹನಗಳನ್ನು ಪ್ರತಿದಿನ ಪಾಯಿಂಟ್‌ವಾರು ಕರ್ತವ್ಯಕ್ಕೆ ನೇಮಿಸಿಕೊಂಡು ಬರಲಾಗಿದೆ.<br><br>8. ಕಾಟನ್ ಪೇಟೆ ಪೊಲೀಸ್ ಠಾಣೆಯಿಂದ ಪ್ರತಿ ದಿನ ಗುಬ್ಬಿ ತೋಟದಪ್ಪ ರಸ್ತೆ ಮತ್ತು ರೈಲ್ವೆ ನಿಲ್ದಾಣದ ಸಬ್ ವೇ ಗಸ್ತು ಕರ್ತವ್ಯಕ್ಕೆ 1 ಎಎಸ್‌ಐ 5 ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿಕೊಂಡು ಬರಲಾಗಿದೆ. ಅದೇ ರೀತಿಯಾಗಿ ಚೀತಾ ಮತ್ತು ಹೊಯ್ಸಳ ವಾಹನಗಳು ದಿನದ 24 ಗಂಟೆಗಳು ಗಸ್ತು ಕರ್ತವ್ಯಕ್ಕೆ ನೇಮಿಸಿದೆ.<br><br>9. ವಿಶೇಷ ಸಂದರ್ಭಗಳಾದ ಹಬ್ಬ, ಹರಿ ದಿನಗಳಲ್ಲಿ, ವಾರದ ಕೊನೆಯ ದಿನಗಳಲ್ಲಿ ಮತ್ತು ರಜಾ ದಿನಗಳಲ್ಲಿ ಲಕ್ಷಾಂತರ ಪ್ರಯಾಣಿಕರು ಹೊರ ರಾಜ್ಯ ಮತ್ತು ಜಿಲ್ಲೆಗಳಿಗೆ ಪ್ರಯಾಣ ಮಾಡುವ ಹಿನ್ನೆಲೆಯಲ್ಲಿ ಅವರುಗಳ ಸುರಕ್ಷತೆಯ ಸಂಬಂಧ ಪೊಲೀಸ್ ಇನ್ಸ್ ಪೆಕ್ಟರ್ ಉಪ್ಪಾರಪೇಟೆ ಮತ್ತು ಕಾಟನ್ ಪೇಟೆ ಪೊಲೀಸ್ ಠಾಣೆರವರು ಉಪ ವಿಭಾಗ ಮತ್ತು ವಿಭಾಗದಿಂದ ಹೆಚ್ಚುವರಿ ಅಧಿಕಾರಿ ಸಿಬ್ಬಂದಿಗಳನ್ನು ನೇಮಿಸಿಕೊಂಡು ಅಪರಾಧ ಪ್ರಕರಣಗಳನ್ನು ನಿಯಂತ್ರಣ ಮಾಡಲಾಗಿದೆ.<br><br>10. ಅದೇ ರೀತಿಯಾಗಿ ಸಂಚಾರ ಪೊಲೀಸ್ ವಿಭಾಗದಿಂದ ಪೊಲೀಸ್ ಇನ್ಸ್‌ಪೆಕ್ಟರ್ ರವರು ಸಂಚಾರ ವಿಭಾಗಕ್ಕೆ ಸಂಬಂಧಿಸಿದಂತೆ ಪಿಐ ಉಪ್ಪಾರಪೇಟೆ ಸಂಚಾರ ಮತ್ತು ಪಿಐ ಚಾಮರಾಜಪೇಟೆ ಸಂಚಾರ ಪೊಲೀಸ್ ಠಾಣೆಗಳಿಂದ ಸುಮಾರು 30 ರಿಂದ 40 ಜನ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿಕೊಂಡು ಸಾರ್ವಜನಿಕರ ವಾಹನಗಳ ಸುಗಮ ಸಂಚಾರಕ್ಕೆ ಆದ್ಯತೆಯನ್ನು ನೀಡಿದೆ.<br><br>11. ತುರ್ತು ಸಹಾಯಕ್ಕೆ 112 ಉಪಯೋಗಿಸಿಕೊಳ್ಳುವಂತೆ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ.<br><br>12. ಚೀತಾ ಮತ್ತು ಹೊಯ್ಸಳ ವಾಹನಗಳನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿಕೊಳ್ಳುತ್ತಾ ಅಪರಾಧ ಪ್ರಕರಣಗಳನ್ನು ನಿಯಂತ್ರಣ ಮಾಡಿದೆ.<br><br>13. ಸಾರ್ವಜನಿಕರ ಸುರಕ್ಷತೆಗಾಗಿ ಮೆಜೆಸ್ಟಿಕ್ ಸುತ್ತಮುತ್ತಲಿನ ಪ್ರದೇಶದಲ್ಲಿ ಕರ್ನಾಟಕ ಪಬ್ಲಿಕ್ ಸೇಫ್ಟಿ ಎನ್‌ಫೋರ್ಸ್‌ಮೆಂಟ್ ಆಕ್ಟ್ ಅಡಿಯಲ್ಲಿ ಒಟ್ಟು ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ 22 ಅಂಗಡಿಗಳಿಂದ 88 ಕ್ಯಾಮರಾ, ಬಿಎಂಟಿಸಿ ಬಸ್ ನಿಲ್ದಾಣದಲ್ಲಿ 15 ಅಂಗಡಿಗಳಿಂದ 60 ಕ್ಯಾಮರಾಗಳನ್ನು ಅಳವಡಿಸಲಾಗಿದೆ. ಟಿ ಬಿ ರಸ್ತೆಯಲ್ಲಿ ವಿವಿಧ ಅಂಗಡಿಗಳ ಮಾಲೀಕರುಗಳ ಕಡೆಯಿಂದ 62 ಕ್ಯಾಮರಾಗಳನ್ನು ಅದೇ ರೀತಿಯಾಗಿ ಕಾಟನ್‌ಪೇಟೆ ರಸ್ತೆಯ ಗುಬ್ಬಿ ತೋಟದಪ್ಪ ರಸ್ತೆಯಲ್ಲಿ 8 ಕ್ಯಾಮರಾ ಒಟ್ಟು 218 ಕ್ಯಾಮರಾಗಳನ್ನು ಅಳವಡಿಸಲಾಗಿದೆ. |

14. ಇವುಗಳಲ್ಲದೆ ಸೇಫ್ ಸಿಟಿ ಯೋಜನೆಯಡಿಯಲ್ಲಿ ನೇತ್ರಾ ಕ್ಯಾಮರಾ ಮತ್ತು ಖಾಸಗಿ ಕ್ಯಾಮರಾಗಳನ್ನು ಮಜೆಸ್ಟಿಕ್ ಬಸ್ ನಿಲ್ದಾಣದ ಈ ಕೆಳಕಂಡ ಸ್ಥಳಗಳಲ್ಲಿ ಹಾಕಲಾಗಿದೆ.

| ಕ್ರ.ಸಂ. | ನೇತ್ರಾ ಕ್ಯಾಮರಾ ಅಳವಡಿಸಿರುವ ಸ್ಥಳ | ಕ್ಯಾಮರಾಗಳ ಸಂಖ್ಯೆ |
|---|---|---|
| 1 | ಬಿಎಂಟಿಸಿ & ಕೆಎಸ್‌ಆರ್‌ಟಿಸಿ ಇಸ್ಟ್ | 02 ನೇತ್ರಾ ಕ್ಯಾಮರಾ |
| 2 | ಕೆಎಸ್‌ಆರ್‌ಟಿಸಿ ಸರ್ವೀಸ್ ರಸ್ತೆ | 02 ನೇತ್ರಾ ಕ್ಯಾಮರಾ |
| 3 | ಕೆಎಸ್‌ಆರ್‌ಟಿಸಿ ವೆಸ್ಟ್ (ಎಕ್ಸಿಟ್ ಗೇಟ್ | 02 ನೇತ್ರಾ ಕ್ಯಾಮರಾ |
| 4 | ಟರ್ಮಿನಲ್ -3 ಶಾಂತಲಾ ಸರ್ಕಲ್ | 02 ನೇತ್ರಾ ಕ್ಯಾಮರಾ |
| 5 | 7ನೇ ಬಿಎಂಟಿಸಿ ಡಿಪೋ | 02 ನೇತ್ರಾ ಕ್ಯಾಮರಾ |
| 6 | ಕೆಎಸ್‌ಆರ್ ಟಿಸಿ ಟರ್ಮಿನಲ್ 1ರ ಕಾರ್ಗೋ ಕಛೇರಿ ಬಳಿ | 02 ನೇತ್ರಾ ಕ್ಯಾಮರಾ |
| 7 | ಗಣಪತಿ ದೇವಸ್ಥಾನದ ಬಳಿ ಟಿಬಿ ರಸ್ತೆ | 02 ನೇತ್ರಾ ಕ್ಯಾಮರಾ |
| 8 | ಆರ್ಯುವೇದಿಕ್ ಪಾಯಿಂಟ್ & ಟಿಬಿ ರಸ್ತೆ | 06 ಖಾಸಗಿ ಕ್ಯಾಮರಾ<br>02 ನೇತ್ರಾ ಕ್ಯಾಮರಾ |
| 9 | ಎಲೈಟ್ ಜಂಕ್ಷನ್ | 04 ನೇತ್ರಾ ಕ್ಯಾಮರಾ |
| 10 | ತುಳಸಿ ತೋಟದ ರಸ್ತೆ | 02 ನೇತ್ರಾ ಕ್ಯಾಮರಾ |
| **ಒಟ್ಟು ಉಪ್ಪಾರಪೇಟೆ ಪೊಲೀಸ್ ಠಾಣೆಯಿಂದ** | | **28 ಕ್ಯಾಮರಾಗಳು** |
| 11 | ಸಿಟಿ ರೈಲ್ವೆ ನಿಲ್ದಾಣದ ಎಂಟ್ರೆನ್ಸ್ | 04 ನೇತ್ರಾ ಕ್ಯಾಮರಾ |
| 12 | ಶಾಂತಲಾ ಸರ್ಕಲ್ | 04 ನೇತ್ರಾ ಕ್ಯಾಮರಾ |
| 13 | ಸ್ವಾಕ್ ರಸ್ತೆ | 02 ನೇತ್ರಾ ಕ್ಯಾಮರಾ |
| 14 | ಸಂಗೊಳ್ಳಿ ರಾಯಣ್ಣ ವೃತ್ತ (ಖೋಡೆಸ್ ಸರ್ಕಲ್) | 04 ನೇತ್ರಾ ಕ್ಯಾಮರಾ |
| **ಒಟ್ಟು ಕಾಟನ್ ಪೇಟೆ ಪಿಎಸ್ ನಿಂದ** | | **14 ನೇತ್ರಾ ಕ್ಯಾಮರಾ** |

ಇ) ಗುಬ್ಬಿ ತೋಟದಪ್ಪ ರಸ್ತೆ, ಧನ್ವಂತರಿ ರಸ್ತೆ ಸಂಪರ್ಕ ಕಲ್ಪಿಸುವ ಪಾದಚಾರಿ ಮೇಲ್ ಸೇತುವೆ, ರೈಲು ನಿಲ್ದಾಣದ ಕಡೆಗೆ ಸಾಗುವ ಅಂಡರ್ ಪಾಸ್‌ಗಳು ಅಪಾಯಕಾರಿ ಸ್ಥಳಗಳಾಗಿ ಪರಿವರ್ತನೆಯಾಗಿವೆ ಮೆಜೆಸ್ಟಿಕ್ ಸುತ್ತಮುತ್ತ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? (ವಿವರಗಳನ್ನು ನೀಡುವುದು)

**ಮೆಜೆಸ್ಟಿಕ್ ಸುತ್ತಮುತ್ತ ಅಪರಾಧ ಪ್ರಕರಣಗಳನ್ನು ತಡೆಗಟ್ಟಲು ಈ ಕೆಳಕಂಡ ಕ್ರಮಗಳನ್ನು ಕೈಗೊಂಡಿದೆ.**

1. ಕಾಟನ್ ಪೇಟೆ ಪೊಲೀಸ್ ಠಾಣೆಯಿಂದ ಪ್ರತಿ ದಿನ ಗುಬ್ಬಿ ತೋಟದಪ್ಪ ರಸ್ತೆ ಮತ್ತು ರೈಲ್ವೆ ನಿಲ್ದಾಣದ ಸಬ್ ವೇ ಗಸ್ತು ಕರ್ತವ್ಯಕ್ಕೆ 1 ಎಎಸ್ ಐ 5 ಸಿಬ್ಬಂದಿಗಳನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿಕೊಂಡು ಬರಲಾಗಿದೆ. ಅದೇ ರೀತಿಯಾಗಿ ಚೀತಾ ಮತ್ತು ಹೊಯ್ಸಳ ವಾಹನಗಳನ್ನು ಗಸ್ತು ಕರ್ತವ್ಯಕ್ಕೆ ನೇಮಿಸಿಕೊಳ್ಳಲಾಗಿದೆ.

2. ಮಹಿಳೆಯರಿಗಾಗಿ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ BMTC ಬಸ್ ನಿಲ್ದಾಣದ ಮೇಲೆ ಸಖಿ ಒನ್ ಸ್ಟಾಪ್ ಕೇಂದ್ರವನ್ನು ತೆರೆಯಲಾಗಿದೆ. ಸದರಿ ಸೆಂಟರ್‌ಗೆ ಪೊಲೀಸ್ ಆಯುಕ್ತರ ಕಛೇರಿಯಿಂದ ಒಬ್ಬ ಮಹಿಳಾ

| | | |
|---|---|---|
| | | ಪಿಎಸ್‌ಐರವರನ್ನು ಪ್ರತಿ ದಿನ ಕರ್ತವ್ಯಕ್ಕೆ ನಿಯೋಜಿಸಲಾಗಿರುತ್ತದೆ. ನೊಂದ ಮಹಿಳೆಯರಿಗೆ ಆಪ್ತಸಮಾಲೋಚನೆ, ಕಾನೂನು ನೆರವು, ವೈದ್ಯಕೀಯ ನೆರವು, ತಾತ್ಕಾಲಿಕ ಆಶ್ರಯ, ಪೊಲೀಸ್ ನೆರವು ನೀಡಲಾಗುತ್ತಿದೆ.<br><br>3. ಉಪ್ಪಾರಪೇಟೆ ಮತ್ತು ಕಾಟನ್ ಪೇಟೆ ಪೊಲೀಸ್ ಠಾಣೆಗಳಿಂದ ಪ್ರತಿ ದಿನ ಅಂಡರ್ ಪಾಸ್ ಮತ್ತು ಮೇಲ್ಸೇತುವೆಗಳ ಬಳಿ ಮತ್ತು ಸಿಟಿ ರೈಲ್ವೆ ನಿಲ್ದಾಣದ ಮುಂಭಾಗದಲ್ಲಿ ಪ್ರತಿ ದಿನ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿ ಅಪರಾಧ ಪ್ರಕರಣಗಳನ್ನು ನಿಯಂತ್ರಣ ಮಾಡಲಾಗುತ್ತಿದೆ.<br><br>4. ಪ್ರತಿ ದಿನ ಠಾಣಾ ಸಿಬ್ಬಂದಿಗಳ ಕಡೆಯಿಂದ ಅನುಮಾನಸ್ಪದ ವ್ಯಕ್ತಿಗಳನ್ನು ಅವರ ಗುರುತಿನ ಚೀಟಿಯ ಮೂಲಕ ತಪಾಸಣೆ ಮಾಡುವುದಲ್ಲದೆ ಎಂಸಿಸಿಟಿಎನ್‌ಎಸ್ ಆಪ್ ಮೂಲಕ ಫಿಂಗರ್ ಪ್ರಿಂಟ್ ಅನ್ನು ಕೂಡ ಪರಿಶೀಲಿಸಲಾಗುತ್ತಿದೆ.<br><br>5. ಮೆಜೆಸ್ಟಿಕ್‌ಗೆ ಹೊಂದಿಕೊಂಡಂತೆ ಇರುವ ಶಾಂತಲಾ ಸರ್ಕಲ್, ಆಯುರ್ವೇದಿಕ್ ಪಾಯಿಂಟ್ ಮತ್ತು ಇತ್ಯಾದಿ ರಸ್ತೆಗಳಲ್ಲಿ ವಾಹನ ತಪಾಸಣೆ ಮಾಡುವ ಮೂಲಕ ಅಪರಾಧ ಪ್ರಕರಣಗಳನ್ನು ನಿಯಂತ್ರಣ ಮಾಡಲಾಗುತ್ತದೆ.<br><br>6. ಅಪರಾಧ ಪ್ರಕರಣಗಳನ್ನು ತಡೆಗಟ್ಟುವ ಸಲುವಾಗಿ ಒಟ್ಟು 14 **Face Recognition Camera** ಗಳನ್ನು ಅಳವಡಿಸಲಾಗಿದೆ. ಈ ಕ್ಯಾಮರಾಗಳ ಮೂಲಕ ಕಮಾಂಡ್ ಸೆಂಟರ್‌ನಲ್ಲಿ ಆರೋಪಿಗಳ ಗುರುತು ಪತ್ತೆ ಕಾರ್ಯ ನಡೆಸಲಾಗುತ್ತಿದೆ.<br><br>7. ಮಫ್ತಿಯಲ್ಲಿ ಸಿಬ್ಬಂದಿಗಳನ್ನು ಮೆಜೆಸ್ಟಿಕ್ ಬಸ್ ನಿಲ್ದಾಣಕ್ಕೆ ನಿಯೋಜಿಸಿ ಅಪರಾಧ ಪ್ರಕರಣಗಳನ್ನು ಪತ್ತೆ ಮಾಡುವುದು ಮತ್ತು ನಿಯಂತ್ರಣ ಮಾಡುವ ಕಾರ್ಯವನ್ನು ನಿರಂತರವಾಗಿ ಮಾಡಲಾಗುತ್ತಿದೆ.<br><br>8. ವಿಶೇಷ ಸಂದರ್ಭದಲ್ಲಿ ಹೆಚ್ಚುವರಿ ಅಧಿಕಾರಿ ಸಿಬ್ಬಂದಿಗಳನ್ನು ನೇಮಿಸಿಕೊಂಡು ಪ್ರಯಾಣಿಕರ ಸುರಕ್ಷತೆಗೆ ಆದ್ಯತೆಯನ್ನು ನೀಡುತ್ತಾ ಬಂದಿದೆ. ಅದೇ ರೀತಿಯಾಗಿ ಮಹಿಳಾ ಪ್ರಯಾಣಿಕರ ಸುರಕ್ಷತೆಯ ದೃಷ್ಟಿಯಿಂದ ಪೊಲೀಸ್ ಮಹಿಳಾ ಅಧಿಕಾರಿ ಮತ್ತು ಸಿಬ್ಬಂದಿಗಳನ್ನು ನೇಮಿಸಿಕೊಂಡು ಗಸ್ತು ಕರ್ತವ್ಯವನ್ನು ನಿರ್ವಹಿಸಲಾಗುತ್ತಿದೆ. |

ಹೆಚ್‌ಡಿ 188 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.